01.6.14

## ತಂದೆ ಕಾಲಿಗೆ ಸಿಕ್ಕ ಮಗು ಸಾವು

**ಚಳ್ಳಕೆರೆ:** ಹೆತ್ತ ತಂದೆ ಅರಿವಿಗೆ ಬರದೆ ಕಾಲಿಗೆ ಸಿಕ್ಕ ಹಸುಗೂಸು ಸ್ಥಳದಲ್ಲೇ ಮೃತಪಟ್ಟ ಧಾರುಣ ಘಟನೆ ಚಳ್ಳಕೆರೆ ತಾಲೂಕು ಗಂಜಿಗುಂಟೆ ಲಂಬಾಣಿಹಟ್ಟಿಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದೆ. ವಿಜಯಕುಮಾರ್, ಲಕ್ಷ್ಮಿಬಾಯಿ ದಂಪತಿಯ ಎರಡು ತಿಂಗಳ ಗಂಡುಮಗು ರಮೇಶ್ ಮೃತಪಟ್ಟ ನತದೃಷ್ಟ ಮಗು. ತಾಯಿ ಲಕ್ಷ್ಮಿಬಾಯಿ ಮಗುವಿಗೆ ರಗ್ಗು ಹೊದಿಸಿ ಮಲಗಿಸಿದ್ದರು. ಈ ಸಂದರ್ಭದಲ್ಲಿ ವಿದ್ಯುತ್ ಸ್ಥಗಿತಗೊಂಡಿತ್ತು. ಕತ್ತಲಿನಲ್ಲಿ ಗೊತ್ತಾಗದೆ ವಿಜಯಕುಮಾರ್ ಮಗುವಿನ ಮೇಲೆ ಕಾಲಿಟ್ಟಾಗ ಈ ದುರ್ಘಟನೆ ನಡೆದಿದೆ. ಎರಡು ವರ್ಷದ ಹಿಂದೆಯಷ್ಟೇ ಮದುವೆಯಾಗಿದ್ದ ಈ ಜೋಡಿ ಗಂಡುಮಗು ಜನಿಸಿದಾಗ ಇದ್ದ ಸಂಭ್ರಮ ಈಗಿಲ್ಲ. ಇಷ್ಟೆಲ್ಲ ಅನಾಹುತಕ್ಕೆ ರಾತ್ರಿ ವೇಳೆ ವಿದ್ಯುತ್ ಕಡಿತವೇ ಕಾರಣ ಎನ್ನಲಾಗಿದೆ.

ಉದಯವಾಣಿ 9.2.14 (9)

## ■ 26 ಕಲ್ಲಿದ್ದಲು ಗಣಿ ಪರವಾನಗಿ ರದ್ದಿಗೆ ಶಿಫಾರಸು

**ನವದೆಹಲಿ:** ಗಣಿ ಗುತ್ತಿಗೆ ಸಿಕ್ಕ ಹೊರತಾಗಿಯೂ, ಆ ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸದ 26 ಕಂಪನಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರದ ಅಂತರ್ ಸಚಿವರ ಮಟ್ಟದ ಸಮಿತಿ ಶಿಫಾರಸು ಮಾಡಿದೆ. ಶುಕ್ರವಾರ ಮತ್ತು ಶನಿವಾರ ಇಲ್ಲಿ ಸಭೆ ಸೇರಿದ್ದ ಸಮಿತಿ ಒಟ್ಟಾರೆ 61 ಗಣಿ ಗುತ್ತಿಗೆಗಳ ಮಾಹಿತಿಯನ್ನು ಪರಿಶೀಲಿಸಿದ್ದು, ಅದರಲ್ಲಿ ಇನ್ನೂ ಗಣಿಗಾರಿಕೆ ಆರಂಭಿಸದ 26 ಕಂಪನಿಗಳಿಗೆ ನೀಡಿರುವ ಗಣಿ ಪರವಾನಗಿ ರದ್ದು ಮಾಡುವಂತೆ ಶಿಫಾರಸು ಮಾಡಿದೆ. ಇದೇ ಕಾರಣಕ್ಕಾಗಿಯೇ ಈಗಾಗಲೇ ಟಾಟಾ ಸ್ಟೀಲ್, ಹಿಂಡಾಲ್ಕೋ, ಜಿಂದಾಲ್ ಸೇರಿದಂತೆ ಹಲವು ಕಂಪನಿಗಳಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ.

09.2.14

**2** **26 ಕಲ್ಲಿದ್ದಲು ಗಣಿಗಳನ್ನು ರದ್ದುಪಡಿಸಲು ಕೇಂದ್ರದ ಅಂತರ ಸಚಿವಾಲಯ ಸಮಿತಿ ಶಿಫಾರಸು**